KACM210033812023

**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.

ಉಪಸ್ಥಿತರು

ಶ್ರೀಮತಿ ಸವಿತರಾಣಿ ಹೆಚ್.ವಿ.,
ಬಿ.ಎ. ಎಲ್., ಎಲ್.ಎಲ್.ಬಿ,
**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ಕಡೂರು.

**ದಿನಾಂಕ 09 ನೇ ಜನವರಿ 2025**

**ಅಸಲು ದಾವಾ ಸಂಖ್ಯೆಃ 475/2023**

**ವಾದಿಯರುಃ**

1. **ಶ್ರೀ ಆರ್.ಹನುಮಂತಪ್ಪ ಬಿನ್ ರಾಜಪ್ಪ,**
ಸುಮಾರು 55 ವರ್ಷ, ವ್ಯವಸಾಯಗಾರರು,

2. **ಶ್ರೀ ಆರ್.ಪ್ರಕಾಶ್ ಬಿನ್ ರಾಜಪ್ಪ,**
ಸುಮಾರು 50 ವರ್ಷ, ವ್ಯವಸಾಯಗಾರರು,

3. **ಶ್ರೀ ಆರ್.ರಮೇಶ ಬಿನ್ ರಾಜಪ್ಪ,**
ಸುಮಾರು 43 ವರ್ಷ, ವ್ಯವಸಾಯಗಾರರು,

4. **ಶ್ರೀಮತಿ ಮೀನಾ ಕೋಂ ಆರ್. ಹನುಮಂತಪ್ಪ**
ಸುಮಾರು 52 ವರ್ಷ, ಗೃಹಿಣಿ,

5. **ಶ್ರೀಜಿ.ಹೆಚ್.ಶಶಿಕುಮಾರ, ಬಿನ್ ಆರ್.ಹನುಮಂತಪ್ಪ**
ಸುಮಾರು 32 ವರ್ಷ, ವ್ಯವಸಾಯಗಾರರು,
ವಾದಿಗಳಾದ 1 ರಿಂದ 5 ನೇಯವರ ವಾಸಃ
ಗೋಪಾಲ ಪುರ ಗ್ರಾಮ (ಬೆಳ್ಳಿಗುತ್ತಿ),
ಎಮ್ಮೆದೊಡ್ಡಿ ಅಂಚೆ, ಬೀರೂರು ಹೋಬಳಿ,
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**(ಪ್ರತಿನಿಧಿಸುವವರುಃ ಶ್ರೀ ಎಸ್.ಸಿ.ಎನ್., ವಕೀಲರು)**

KACM210033812023

**-ವಿರುದ್ಧ-**

**ಪ್ರತಿವಾದಿ** : ಶ್ರೀ ಗೋವಿಂದಪ್ಪ ಬಿನ್ ಲೇಟ್ ರಾಮಯ್ಯ,
ಸುಮಾರು 55 ವರ್ಷ ವಯಸ್ಸು, ವ್ಯವಸಾಯಗಾರರು,
ವಾಸಃ ಬಳ್ಳಾರಿ ಕ್ಯಾಂಪ್, ಬೀರೂರು ಪಟ್ಟಣ,
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**(ಪ್ರತಿವಾದಿ ಪರ ಶ್ರೀ ಹೆಚ್.ಎನ್.ಎಸ್., ವಕೀಲರು ವಕೀಲರು)**

**:: ಮಧ್ಯಂತರ ಅರ್ಜಿ ಸಂಖ್ಯೆಃ 2 ರ ಪಕ್ಷಗಾರರು ::**

**ಅರ್ಜಿದಾರರುಃ** ಶ್ರೀ ಗೋವಿಂದಪ್ಪ.

**-ವಿರುದ್ಧ-**

**ಎದುರುದಾರರುಃ** ಆರ್.ಹನುಮಂತಪ್ಪ ಮತ್ತು ಇತರರು.

**:: ಮಧ್ಯಂತರ ಅರ್ಜಿ ಸಂಖ್ಯೆ - 2 ರ ಮೇಲಿನ ಆದೇಶ ::**

ಪ್ರಸ್ತುತ ಈ ಮಧ್ಯಂತರ ಅರ್ಜಿ-2 ನ್ನು ಪ್ರತಿವಾದಿಯ ಪರ ವಕೀಲರು ವಾದಿಯರ ವಿರುದ್ಧ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಎ) ಮತ್ತು (ಡಿ) ರಡಿಯಲ್ಲಿ ಸಲ್ಲಿಸಿ, ವಾದಿಯ ವಾದಪತ್ರವನ್ನು ತಿರಸ್ಕರಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

**2.** ಪ್ರತಿವಾದಿಯು ಈ ಮಧ್ಯಂತರ ಅರ್ಜಿಯ ಜೊತೆಗೆ ಸಲ್ಲಿಸಲಾದ ಪ್ರಮಾಣ ಪತ್ರದಲ್ಲಿ ತಿಳಿಸಿದ ಅಂಶಗಳೆಂದರೆ, ವಾದಿಯು ಈ ದಾವೆಯನ್ನು

ಪ್ರತಿವಾದಿಯರ ವಿರುದ್ಧ ಶಾಶ್ವತ ನಿರ್ಭಂದಕಾಜ್ಞೆ ಆದೇಶ ಕೋರಿ ಸಲ್ಲಿಸಿದ್ದು, ವಾದಪತ್ರದಲ್ಲಿ ತಿಳಿಸಿದಂತೆ ವ್ಯಾಜ್ಯ ಕಾರಣವು ಏರ್ಪಟ್ಟಿರುವುದಿಲ್ಲ ಅದು ಕಾಲ್ಪನಿಕವಾಗಿರುತ್ತದೆ ಹಾಗೂ ವಾದಿ ದಾವಾ ಆಸ್ತಿಯ ಮೇಲೆ ಯಾವುದೇ ಮಾಲೀಕತ್ವವಿರುವುದಿಲ್ಲ. ಹೀಗಿರುವಾಗ ಮಾಲೀಕತ್ವದ ಘೋಷಣೆಯನ್ನು ಪಡೆಯದೆ ಕೇವಲ ಶಾಶ್ವತ ನಿರ್ಭಂಧಕಾಜ್ಞೆ ಪರಿಹಾರವನ್ನು ಪಡೆಯಲು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಇದು ಕಾನೂನಿನಡಿ ನಿಲ್ಲತಕ್ಕದ್ದಲ್ಲ. ಕಡೂರು ತಾಲ್ಲೂಕು, ಬೀರೂರು ಹೋಬಳಿ, ಎಮ್ಮೆದೊಡ್ಡಿ ಗ್ರಾಮದ ಸರ್ವೇ ನಂಬರ್ 70/171 ರಲ್ಲಿ 4 ಗುಂಟೆ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ-ಚಂದ್ರಶೇಖರ ಜಮೀನು, ಪಶ್ಚಿಮಕ್ಕೆ-ಸರ್ಕಾರದ ಜಮೀನು ಮತ್ತು ಶಾಲೆ, ಉತ್ತರಕ್ಕೆ-ರಸ್ತೆ, ದಕ್ಷಿಣಕ್ಕೆ-ಚಂದ್ರಶೇಖರನವರ ಭೂಮಿ ಇರುತ್ತದೆ. ಸದರಿ ಸ್ವತ್ತನ್ನು ತನ್ನ ತಂದೆಯಾದ ರಾಮಯ್ಯ ಬಿನ್ ವೆಂಕಯ್ಯ ನವರಿಗೆ ಸರ್ಕಾರ ಮಂಜೂರು ಮಾಡಿರುತ್ತದೆ. ತದನಂತರ ತನ್ನ ತಂದೆಗೆ ಖಾತೆ ಸಹ ಬಂದಿರುತ್ತದೆಂದು ತಿಳಿಸಿರುತ್ತಾರೆ. ತನ್ನ ತಂದೆ ಮರಣಾ ನಂತರ ತನಗೆ ವಾರಸುದಾರಿಕೆಯ ಮೂಲಕ ಸದರಿ ಸ್ವತ್ತು ಬಂದಿದ್ದು ತಾನು ಸ್ವಾಧೀನದಲ್ಲಿದ್ದು ಅನುಭವಿಸಿಕೊಂಡು ಬರುತ್ತಿರುವುದಾಗಿ ತಿಳಿಸಿರುತ್ತಾರೆ. ಆದರೆ 1 ರಿಂದ 3 ನೇ ವಾದಿಯರು ಹಾಗೂ ರಾಜಪ್ಪ ಮತ್ತು ಇತರರು ತನ್ನ ಮಾಲೀಕತ್ವವನ್ನು ನಿರಾಕರಿಸಿರುತ್ತಾರೆ ಮತ್ತು ಸ್ವಾಧೀನಕ್ಕೆ ತೊಂದರೆ ನೀಡುತ್ತಿರುತ್ತಾರೆ. ಆದ್ದರಿಂದ ತಾನು ಅಸಲು ದಾವೆ ಸಂಖ್ಯೆ.599/1999 ನ್ನು

KACM210033812023

ಘೋಷಣಾತ್ಮಕ ಮತ್ತು ಶಾಶ್ವತ ನಿರ್ಭಂಧಕಾಜ್ಞೆ ಕೋರಿ ಸಲ್ಲಿಸಿದ್ದು, ಸದರಿ ದಾವೆ ತನ್ನ ಪರವಾಗಿ ತೀರ್ಪುಗೊಂಡಿರುತ್ತದೆ. ತದನಂತರ 1 ರಿಂದ 3 ನೇ ವಾದಿಯರ ತಂದೆ ಸದರಿ ಆದೇಶವನ್ನು ಪ್ರಶ್ನಿಸಿ ಆರ್.ಎ.49/2005 ನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿ ವಜಾಗೊಂಡಿರುತ್ತದೆ. ತದನಂತರ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ಆರ್.ಎಸ್.ಎ ಸಂಖ್ಯೆಃ 2861/2006 ನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯೂ ವಜಾಗೊಂಡಿರುತ್ತದೆ. ಹೀಗಿದ್ದರೂ ಸಹ 1 ರಿಂದ 3 ನೇ ವಾದಿಯರ ತಂದೆ ಮತ್ತು ಇತರರು ತನ್ನ ಸ್ವಾಧೀನಕ್ಕೆ ತೊಂದರೆ ನೀಡುತ್ತಲೇ ಇದ್ದುದರಿಂದ ತಾನು ಅಮಲ್ಜಾರಿ ಅರ್ಜಿ ಸಂಖ್ಯೆ 84/2005 ನ್ನು ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಉಲ್ಲಂಘಿಸಿರುತ್ತಾರೆಂದು ಅರ್ಜಿ ಸಲ್ಲಿಸಿದ್ದು, ಅದರಲ್ಲಿ ಪೋಲೀಸರಿಗೆ ನಿರ್ದೇಶನ ನೀಡಿ ವಜಾಗೊಂಡಿರುತ್ತದೆ. ತದನಂತರ ತಾನು ಅಮಲ್ಜಾರಿ ಅರ್ಜಿ ಸಂಖ್ಯೆ 13/2011 ರಂತೆ ಅರ್ಜಿ ಸಲ್ಲಿಸಿದ್ದು, ಸದರಿ ಆರ್ಜಿಯು ದಿನಾಂಕಃ 20.11.2019 ರಂದು ವಜಾಗೊಂಡಿರುತ್ತದೆ. ಆದ್ದರಿಂದ ಸದರಿ ಆದೇಶವನ್ನು ಪ್ರಶ್ನಿಸಿ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ಸಿ.ಆರ್.ಪಿ ಸಂಖ್ಯೆ.244/2020 ನ್ನು ಸಲ್ಲಿಸಿದ್ದು, ಗೌರವಾನ್ವಿತ ಉಚ್ಚ ನ್ಯಾಯಾಲಯ ದಿನಾಂಕಃ 18.04.2023 ರಂದು ಮಧ್ಯಂತರ ಆದೇಶವನ್ನು ಮಾಡಿ ಪೋಲೀಸ್ ರಕ್ಷಣೆ ನೀಡಬೇಕೆಂದು ಅಸಲು ದಾವೆ ಸಂಖ್ಯೆ.599/1999 ರ ಆದೇಶದಂತೆ ಪೋಲೀಸ್ ರಕ್ಷಣೆಯನ್ನು ನೀಡಿಬೇಕೆಂದು ಆದೇಶಿಸಿತ್ತು. ಸದರಿ ಆದೇಶವು ಇಂದಿಗವೂ ಸಹ ಚಾಲ್ತಿಯಲ್ಲಿರುತ್ತದೆ.

KACM210033812023

ಹೀಗಿರುವಾಗ 1 ರಿಂದ 3 ನೇ ವಾದಿಯರು, ರಾಜಪ್ಪನವರು ತನ್ನ ಸ್ವತ್ತಿನ ಸ್ವಾಧೀನಕ್ಕೆ ತೊಂದರೆ ನೀಡುತ್ತಲೇ ಬಂದಿರುತ್ತಾರೆ. ಆದ್ದರಿಂದ ಗೌರವಾನ್ವಿತ ಉಚ್ಚ ನ್ಯಾಯಾಲಯದ ಆದೇಶದಂತೆ ಪೋಲೀಸರು ಸ್ಥಳಕ್ಕೆ ಬಂದು ವಾದಿಗಳಿಗೆ ಕಾನೂನುಬಾಹಿರವಾಗಿ ಮದ್ಯಪ್ರವೇಶಿಸುವುದನ್ನು ನಿಲ್ಲಿಸುವಂತೆ ತಿಳಿಸಿದ್ದರು. ಆದರೂ ಸಹ ವಾದಿಯರು ಕಾನೂನುಬಾಹಿರವಾಗಿ ಮದ್ಯ ಪ್ರವೇಶಿಸಿದ್ದರಿಂದ ಪೋಲೀಸರು ಕಡೂರಿನ ತಹಸೀಲ್ದಾರ್ ರವರಿಗೆ ಸ್ವಯಂ ಪ್ರೇರಿತ ಪ್ರಕರಣವನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 107 ರಡಿ ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ವಾದಿಯರು ಹೇಳಿಕೆಯನ್ನು ನೀಡಿ ದಾವಾ ಸ್ವತ್ತಿನ ತನ್ನ ಸ್ವಾಧೀನಕ್ಕೆ ಮದ್ಯ ಪ್ರವೇಶಿಸುವುದಿಲ್ಲವೆಂದು ತಿಳಿಸಿ, ರೂ.1,00,000/-ಕ್ಕೆ ಬಾಂಡನ್ನೂ ಸಹ ಬರೆದುಕೊಟ್ಟಿರುತ್ತಾರೆ.

ರಾಜಪ್ಪನ ಅಳಿಯನಾದ ಶ್ರೀ ಜಿ. ಕುಮಾರಪ್ಪ ಎಂಬುವವರು ಅಸಲು ದಾವೆ ಸಂಖ್ಯೆ 226/2014 ನ್ನು ಕಡೂರಿನ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಪ್ರತಿವಾದಿಯರ ವಿರುದ್ಧ ಸಲ್ಲಿಸಿ, ಶಾಶ್ವರ ನಿರ್ಬಂಧಕಾಜ್ಞೆ ಆದೇಶವನ್ನು ದಾವಾ ಸ್ವತ್ತಿನ ಮೇಲೆ ಕೇಳಿದ್ದರು. ಸದರಿ ದಾವೆಯು ಖರ್ಚಿನೊಂದಿಗೆ ವಜಾಗೊಂಡಿರುತ್ತದೆ.

1 ರಿಂದ 3 ನೇ ವಾದಿಯರ ತಂದೆ ರಾಜಪ್ಪ ಮತ್ತು ಇತರರು ಸೇರಿ ದಾವಾ ಆಸ್ತಿಯಲ್ಲಿನ ತನ್ನ ಮಾಲೀಕತ್ವವನ್ನು ಹಲವಾರು ನ್ಯಾಯಾಲಯಗಳಲ್ಲಿ ತುಂಬಾ

KACM210033812023

ವರ್ಷಗಳಿಂದ ಅಲ್ಲಗಳೆದಿದ್ದರೂ ಸಹ ತಮ್ಮ ಪ್ರಯತ್ನಗಳಲ್ಲಿ ವಿಫಲರಾಗಿರುತ್ತಾರೆ, ಆದರೂ ಸಹ ನ್ಯಾಯಾಲಯಗಳು ತನ್ನ ಪರವಾಗಿ ತನ್ನ ಮಾಲೀಕತ್ವವನ್ನು ಗುರುತಿಸಿ ತನ್ನ ಪರವಾಗಿ ತೀರ್ಪು ಮತ್ತು ಡಿಕ್ರಿಯನ್ನು ನೀಡಿರುತ್ತದೆ. ಹೀಗಿರುವಾಗ ರಾಜಪ್ಪನ ಮಕ್ಕಳಾದ ವಾದಿಯರಿಗೆ ದಾವಾ ಆಸ್ತಿಯ ಮೇಲೆ ಮರು ಪ್ರಶ್ನೆ ಮಾಡಲು ಅನುಮತಿ ಇರುವುದಿಲ್ಲ. ಆದ್ದರಿಂದ ದಾವೆಯನ್ನು ವಜಾಗೊಳಿಸಬೇಕೆಂದು ತಿಳಿಸಿರುತ್ತಾರೆ. ಮುಂದುವರಿದು, ಇದೇ ದಾವಾ ಆಸ್ತಿಯ ಮೇಲೆ ಇದೇ ಪಕ್ಷಕಾರರು ಇದೇ ವ್ಯಾಜ್ಯ ಕಾರಣದ ಮೇಲೆ ದಾವೆಯನ್ನು ಈಗಾಗಲೆ ಸಲ್ಲಿಸಲಾಗಿರುತ್ತದೆ. ಆದ್ದರಿಂದ ಇದು ಪೂರ್ವ ನ್ಯಾಯ ಸಿದ್ಧಾಂತದಡಿ ಈ ದಾವೆಯು ಊರ್ಜಿತವಾಗಿರುವುದಿಲ್ಲ, ಆದ್ದರಿಂದ ಈ ದಾವೆಯನ್ನು ತಿರಸ್ಕರಿಸುವುದರಿಂದ ವಾದಿಯರಿಗೆ ಯಾವುದೇ ರೀತಿಯ ತೊಂದರೆಯುಂಟಾಗುವುದಿಲ್ಲ. ಒಂದು ವೇಳೆ ಈ ಅರ್ಜಿಯನ್ನು ಪುರಸ್ಕರಿಸದಿದ್ದರೆ ತನಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಆದ್ದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

**3.** ವಾದಿಯರ ಪರ ವಕೀಲರು ಪ್ರತಿವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ-2 ಕ್ಕೆ ತನ್ನ ಪರ ಲಿಖಿತ ತಕರಾರು ಸಲ್ಲಿಸಿದ್ದು, ಪ್ರತಿವಾದಿಯು ವಾದಿಯ ತಂದೆಯವರಾದ ರಾಜಪ್ಪ ಮತ್ತು ಇತರರ ಮೇಲೆ ಕಡೂರಿನ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ.599/1999 ರ ಚಕ್ಕುಬಂದಿಗೂ ವಾದಿಯರು ಸ್ವಾಧೀನಾನುಭವ ಹೊಂದಿ ಅನುಭವಿಸಿಕೊಂಡು ಬರುತ್ತಿರುವ ದಾವಾ

ಶೆಡ್ಯೂಲ್ ಸ್ವತ್ತಿನ ಚಕ್ಕುಬಂದಿಗೂ ವಾದಿಯರು ಸ್ವಾಧೀನ ಹೊಂದಿರುವ ದಾವಾ ಶೆಡ್ಯೂಲ್ ಸ್ವತ್ತಿನ ಚಕ್ಕುಬಂದಿಗೂ ತಾಳೆ ಬಾರದೇ ಇರುವ ಕಾರಣ ಸದರಿ ಮಧ್ಯಂತರ ಅರ್ಜಿಯನ್ನು ವಜಾ ಮಾಡತಕ್ಕದಾಗಿರುತ್ತದೆ. ವಾದಿಯರು ತಾವು ಸ್ವಾಧೀನಾನುಭವ ಹೊಂದಿರುವ ಜಮೀನು ಬಗರ್ ಹುಕುಂ ಜಮೀನಾಗಿದ್ದು, ಸದರಿ ಜಮೀನನ್ನು ಸಕ್ರಮಗೊಳಿಸಿಕೊಡುವಂತೆ ಕಡೂರಿನ ತಹಸೀಲ್ದಾರ್‌ರವರ ಕಚೇರಿಯಲ್ಲಿ ಫಾರಂ ನಂ.53/57 ರಂತೆ ಅರ್ಜಿಗಳನ್ನು ಸಲ್ಲಿಸಿದ್ದು, ಸದರಿ ಅರ್ಜಿಗಳು ಈಗಲೂ ಸಹ ವಿಲೆಗೆ ಬಾಕಿ ಇದ್ದು, ಆದರೆ ಪ್ರತಿವಾದಿಯು ತನ್ನ ಜಮೀನು ಎಂದು ಹೇಳುತ್ತಿರುವ ಜಮೀನಿಗೆ ಕಂದಾಯ ದಾಖಲೆಗಳು ಇದ್ದು, ಕಡೂರಿನ ಸಿವಿಲ್ ನ್ಯಾಯಾಲಯದಲ್ಲಿ ಘೋಷಣಾತ್ಮಾಕ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯು ಡಿಕ್ರಿಯಾಗಿದ್ದರೂ ಸಹ ಪ್ರತಿವಾದಿಯು ವಾದಿಯರ ಆಸ್ತಿಯನ್ನು ಕಬಳಿಸುವ ಸಲುವಾಗಿ ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿ ವಾದಿಯರಿಗೆ ಮಾನಸಿಕವಾಗಿ ತೊಂದರೆ ಕೊಡುತ್ತಿರುತ್ತಾರೆ.

**4.** ವಾದಿಯರು ಹಾಜರುಪಡಿಸಿರುವ ದಾಖಲಾತಿಗಳೆಂದರೆ ಮಾಹಿತಿ ಹಕ್ಕಿನಡಿ ಜಿಲ್ಲಾ ಪೋಲೀಸ್ ಕಛೇರಿ ಚಿಕ್ಕಮಗಳೂರು ರವರು ನೀಡಿದ ದಾಖಲೆಯನ್ನು ಹಾಜರುಪಡಿಸಿರುತ್ತಾರೆ. ಛಾಯಾಚಿತ್ರಗಳನ್ನು ಹಾಜರುಪಡಿಸಿರುತ್ತಾರೆ.

KACM210033812023

**5.** ಪ್ರತಿವಾದಿಯರ ಪರ ಹಾಜರುಪಡಿಸಿರುವ ದಾಖಲಾತಿಗಳೆಂದರೆ ಕಡೂರು ಪೋಲೀಸ್ ಠಾಣೆಯವರು ನೀಡಿದ ಹಿಂಬರಹವನ್ನು ಹಾಜರುಪಡಿಸಿರುತ್ತಾರೆ, ಅಸಲು ದಾವಾ ಸಂಖ್ಯೆ 599/1999ರ ಡಿಕ್ರಿಯ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತಾರೆ, ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ, ಎಂ. ಆರ್ ನ್ನು ಹಾಜರುಪಡಿಸಿರುತ್ತಾರೆ. ಅಸಲು ದಾವಾ ಸಂಖ್ಯೆಃ 226/2014ರ ತೀರ್ಪು ಮತ್ತು ಡಿಕ್ರಿಯ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

**6.** ಪ್ರಸ್ತುತ ಮಧ್ಯಂತರ ಅರ್ಜಿ ಮತ್ತು ಅದರೊಂದಿಗೆ ಲಗತ್ತಿಸಿರುವ ಪ್ರಮಾಣ ಪತ್ರ, ವಾದಿಯ ತಕರಾರು ಮತ್ತು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

**7.** ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

**8.** ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ನ್ಯಾಯಾಲಯದ ಗಮನಕ್ಕೆ ಈ ಕೆಳಕಂಡ ಅಂಶಗಳು ಪರಿಶೀಲನೆಗೆ ಉದ್ಭವಿಸಿರುತ್ತವೆ.

1) ಪ್ರತಿವಾದಿಯು ಪ್ರಸ್ತುತ ದಾವೆಯು ಊರ್ಜಿತವಾಗದ ಕಾರಣ ವಾದ ಪತ್ರವನ್ನು ವಜಾಗೊಳಿಸಲು ಸಕಾರಣಗಳನ್ನು ಮಂಡಿಸಿರುತ್ತಾರೆಯೇ?

2) ಯಾವ ಆದೇಶ?

KACM210033812023

**9.** ನ್ಯಾಯಾಲಯದ ಮುಂದಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಯಿತು ಅದರಂತೆ ಮೇಲ್ಕಂಡ ಅಂಶಗಳಿಗೆ  ಈ ಕೆಳಕಾಣಿಸಿದಂತೆ ಉತ್ತರಿಸಲಾಗಿದೆ ಃ -

ಅಂಶ ನಂ.1 ಃ ನಕಾರಾತ್ಮಕವಾಗಿ

ಅಂಶ ನಂ.2 ಃ ಅಂತಿಮ ಆದೇಶದಂತೆ, ಈ ಕೆಳಕಂಡ

## ಕಾ ರ ಣ ಗ ಳು

**10. ಅಂಶ.1 ಃ-** ಈ ದಾವೆಯನ್ನು ವಾದಿಯರು ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ತಂದಿರುತ್ತಾರೆ. ವಾದಿಯು ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಅನಧಿಕೃತವಾಗಿ ಕೃಷಿ ಮಾಡಿಕೊಂಡು ಸ್ವಾಧೀನದಲ್ಲಿ ಸುಮಾರು 60 ರಿಂದ 65 ವರ್ಷಗಳಿಂದ ಇರುವುದಾಗಿ ತಿಳಿಸಿರುತ್ತಾರೆ. ಅದರೆ ಪ್ರತಿವಾದಿಯರು  ಸದರಿ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ವಾದಿಯು ದಾವೆಯಲ್ಲಿ ತಿಳಿಸಿದಂತೆ ದಿಃ19.06.2023 ರಂದು  ವ್ಯಾಜ್ಯ ಕಾರಣವು ಉಂಟಾಗಿರುವುದಿಲ್ಲ, ಸದರಿ ದಿನದಂದು ಯಾವುದೇ ಪೋಲೀಸ್ ಅಧಿಕಾರಿಗಳು ದಾವಾ ಸ್ವತ್ತಿನ ಬಳಿ ಬಂದಿರುವುದಿಲ್ಲ ಎಂದು ಅದಕ್ಕೆ ಸಂಬಂಧಿಸಿದಂತೆ ದಾಖಲೆಯನ್ನೂ ಸಹ ಹಾಜರುಪಡಿಸಿರುತ್ತಾರೆ.

KACM210033812023

**11.** ಈ ಹಂತದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ -7 ನಿಯಮ 11 ರಲ್ಲಿರುವ ಅಂಶಗಳನ್ನು ನೋಡಬೇಕಾಗಿರುತ್ತದೆ. ಅಂಶಗಳು ಈ ಕೆಳಗಿನಂತೆ ಇರುತ್ತದೆ.

ಈ ಕೆಳಗಿನ ಸಂದರ್ಭಗಳಲ್ಲಿ ವಾದ ಪತ್ರವನ್ನು ತಿರಸ್ಕರಿಸತಕ್ಕದೆಂದು ತಿಳಿಸಿರುತ್ತದೆ.

(ಎ) ಅದರಲ್ಲಿ ವ್ಯಾಜ್ಯ ಕಾರಣವನ್ನು ತಿಳಿಸದಿರುವಲ್ಲಿ.

(ಬಿ) ಕೇಳಲಾದ ಪರಿಹಾರದ ಮೌಲ್ಯವನ್ನು ಕಡಿಮೆಯಾಗಿ ನಮೂದಿಸಿರುವಲ್ಲಿ ಮತ್ತು ತಾನು ಗೊತ್ತುಪಡಿಸುವ ಕಾಲದೊಳಗೆ ಆ ಮೌಲ್ಯ ನಿಗದಿಯನ್ನು ಸರಿಪಡಿಸಬೇಕೆಂದು ನ್ಯಾಯಾಲಯವು ವಾದಿಯನ್ನು ಅಗತ್ಯಪಡಿಸಿದ್ದು, ಅವನು ಹಾಗೆ ಮಾಡಲು ತಪ್ಪಿದ್ದಲ್ಲಿ.

(ಸಿ) ಕೇಳಲಾದ ಪರಿಹಾರದ ಮೌಲ್ಯವನ್ನು ಸರಿಯಾಗಿ ನಮೂದಿಸಿದ್ದರೂ ಸಾಕಷ್ಟು ಸ್ಟಾಂಪುಗಳಿಲ್ಲದ ಕಾಗದದ ಮೇಲೆ ವಾದಪತ್ರವನ್ನು ಬರೆದಿರುವಲ್ಲಿ ಮತ್ತು ನ್ಯಾಯಾಲಯವು ತಾನು ಗೊತ್ತುಪಡಿಸುವ ಕಾಲದೊಳಗೆ ಅಗತ್ಯವಾದ ಸ್ಟಾಂಪು ಕಾಗದವನ್ನು ವಾದಿಯು ಒದಗಿಸಬೇಕೆಂದು ಅವನನ್ನು ಅಗತ್ಯಪಡಿಸಿದ್ದು, ಅವನು ಹಾಗೆ ಮಾಡಲು ತಪ್ಪಿದ್ದಲ್ಲಿ.

(ಡಿ) ವಾದಪತ್ರದಲ್ಲಿನ ಹೇಳಿಕೆಯಿಂದ ದಾವೆಯು ಯಾವುದೇ ಕಾನೂನಿನ ಮೂಲಕ ಪ್ರತಿಬಂಧಿತವಾಗಿದೆಯೆಂದು ಕಂಡು ಬಂದಲ್ಲಿ.

(ಇ) ಅದನ್ನು ದ್ವಿ ಪ್ರತಿಯಲ್ಲಿ ಹಾಜರುಪಡಿಸದಿರುವಾಗ 9 ನೇ ಉಪಬಂಧಗಳನ್ನು ಪಾಲಿಸಲು ವಾದಿಯು ವಿಫಲನಾಗಿರುವಾಗ.

(ಎಫ್) 9 ನೇ ನಿಯಮದ ಉಪಬಂಧಗಳನ್ನು ಪಾಲಿಸಲು ವಾದಿಯು ವಿಫಲನಾದಾಗ,

ಈ ಮೇಲಿನ 6 ಸಂದರ್ಭಗಳಲ್ಲಿ ವಾದಪತ್ರವನ್ನು ತಿರಸ್ಕರಿಸಬಹುದೆಂದು ತಿಳಿಸಿರುತ್ತದೆ.

**12.** ಸಿವಿಲ್ ಪ್ರಕ್ರಿಯ ಸಂಹಿತೆ ಕ್ರಮಾದೇಶ 7 ನಿಯಮ 11 ರ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯನ್ನು ನಿರ್ಣಯಿಸುವಾಗ ವಾದಪತ್ರದಲ್ಲಿ ತಿಳಿಸಿರುವ ಕೆಲವು ಅಂಶಗಳನ್ನು ಮಾತ್ರ ನೋಡಬೇಕು. ಪ್ರತಿವಾದ ಪತ್ರದಲ್ಲಿ ತಿಳಿಸಿದ ಅಂಶಗಳನ್ನು ನೋಡಬಾರದೆಂಬುದು ಕಾನೂನಿನ ತತ್ವವಾಗಿದೆ. ಅಂತೆಯೇ ನ್ಯಾಯಾಲಯವು ಮಧ್ಯಂತರ ಅರ್ಜಿಯಲ್ಲಿ ಮಾಡಿದ ಆರೋಪಗಳನ್ನು ಪರಿಗಣಿಸಬಾರದೆಂದು ತಿಳಿಸಿದೆ.

**13.** ಈಗ ನ್ಯಾಯಾಲಯವು ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ, ವಾದಿಯ ಪರ ವಕೀಲರು ವಾದದಲ್ಲಿ ತಿಳಿಸಿದಂತೆ ದಾವಾ ಸ್ವತ್ತು ಮತ್ತು

KACM210033812023

ಪ್ರತಿವಾದಿಯ ಪ್ರತಿವಾದಪತ್ರ ಹಾಗೂ ತಕರಾರಿನಲ್ಲಿ ತಿಳಿಸಿದ ಸ್ವತ್ತು ಬೇರೆ ಬೇರೆಯಾಗಿದ್ದು ಮತ್ತು ಚಕ್ಕುಬಂದಿಯೂ ಸಹ ಬೇರೆ ಬೇರೆಯಾಗಿರುತ್ತದೆ. ದಾವಾ ಸ್ವತ್ತಿನ ಸರ್ವೇ ನಂಬರ್ 70 ಅಗಿದ್ದು 4 ಎಕರೆ ವಿಸ್ತೀರ್ಣ ಸಂಬಂಧಿಸಿದ್ದಾಗಿರುತ್ತದೆ, ಆದರೆ ಪ್ರತಿವಾದಿಯು ತನ್ನ ಮಧ್ಯಂತರ ಅರ್ಜಿ ಸಂಖ್ಯೆ-2 ರಲ್ಲಿ ತಿಳಿಸಿದಂತೆ ದಾವಾ ಸ್ವತ್ತು 70/171 ರಲ್ಲಿ 4 ಗುಂಟೆ ಆಸ್ತಿಗೆ ಸಂಬಂಧಿಸಿದ್ದಾಗಿರುತ್ತದೆ ಹಾಗೂ ಪ್ರತಿವಾದಿಯು ವಾದಪತ್ರದಲ್ಲಿ ತಿಳಿಸಿದಂತೆ ದಿಃ19.06.2023 ರಂದು ಪೋಲೀಸ್ ಅಧಿಕಾರಿಗಳು ಹಾಗೂ ಗುಂಡಾಗಳೊಂದಿಗೆ ದಾವಾ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ, ಅವರನ್ನು ಅಕ್ರಮವಾಗಿ ಕರೆದುಕೊಂಡು ಬಂದಿರುತ್ತಾರೆ, ಅದಕ್ಕೆ ದಾಖಲೆ ಇರುವುದಿಲ್ಲ. ಅದಕ್ಕೆ ಸಂಬಂಧಿಸಿದಂತೆ ಛಾಯಾಚಿತ್ರವನ್ನು ಹಾಜರುಪಡಿಸಿರುತ್ತೇನೆಂದು ವಾದಿಸಿರುತ್ತಾರೆ. ಸದರಿ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಪ್ರತಿವಾದಿಯು ತನ್ನ ಮಧ್ಯಂತರ ಅರ್ಜಿ ಸಂಖ್ಯೆ-2 ರಲ್ಲಿ ತಿಳಿಸಿರುವ ಸರ್ವೇ ನಂಬರ್ ಮತ್ತು ಸ್ವತ್ತಿನ ಅಳತೆಯು ವಾದಪತ್ರದಲ್ಲಿ ತಿಳಿಸಿರುವ ಸರ್ವೇ ನಂಬರ್ ಮತ್ತು ಅಳತೆಗೂ ವ್ಯತ್ಯಾಸದಿಂದ ಕೂಡಿರುವುದು ಕಂಡುಬಂದಿರುತ್ತದೆ. ದಾವಾ ಸ್ವತ್ತಿನ ಚಕ್ಕುಬಂದಿಯು ಬೇರೆಯಾಗಿದ್ದು , ಪ್ರತಿವಾದಿಯು ಮಧ್ಯಂತರ ಅರ್ಜಿ ಸಂಖ್ಯೆ-2 ರಲ್ಲಿ ತಿಳಿಸಿರುವ ಸ್ವತ್ತಿನ ಚಕ್ಕುಬಂದಿಯು ವ್ಯತ್ಯಾಸದಿಂದ ಕೂಡಿರುವುದು ಕಂಡುಬಂದಿರುತ್ತದೆ. ಆದರೆ ಪ್ರತಿವಾದಿಯು ವ್ಯಾಜ್ಯ ಕಾರಣವೇ ಇರುವುದಿಲ್ಲವೆಂದು ತಿಳಿಸಿದ್ದು, ಆದರೆ ಗೂಂಡಾಗಳು ಹಾಗೂ ಪ್ರತಿವಾದಿಯು

KACM210033812023

ಹೋಗಿ ದಾವಾ ಸ್ವತ್ತಿಗೆ ತೊಂದರೆ ನೀಡಿರುವುದಿಲ್ಲವೆಂದು ತಿಳಿಸಿರುವುದಿಲ್ಲ. ಕೇವಲ ಪೋಲೀಸರು ಹೋಗಿರುವುದಿಲ್ಲವೆಂದು ದಾಖಲೆಯನ್ನು ಹಾಜರುಪಡಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರು ತಿಳಿಸಿರುವ ಅಂಶಗಳನ್ನು ಈ ಹಂತದಲ್ಲಿ ತೀರ್ಮಾನಿಸಲು ಬರುವುದಿಲ್ಲವಾದ್ದರಿಂದ ಪೂರ್ಣ ಸಾಕ್ಷಿ ವಿಚಾರಣೆಯ ಅವಶ್ಯಕತೆ ಇರುವುದರಿಂದ ಈ ನ್ಯಾಯಾಲಯವು ಅಭಿಪ್ರಾಯದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 7 ನಿಯಮ 11 ರ ನಿಬಂಧನೆಯನ್ನು ಅನ್ವಯಿಸಲು ಬರುವುದಿಲ್ಲವೆಂದು ತಿಳಿಸುತ್ತಾ, ಈ ಮೇಲಿನ ಕಾರಣಗಳಿಂದಾಗಿ ಅಂಶ ಸಂಖ್ಯೆಃ 1 ನ್ನು ನಕಾರಾತ್ಮಕ ಎಂದು ನಿರ್ಣಯಿಸಲಾಗಿದೆ.

**14.** **ಅಂಶ 2**:- ಈ ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ**

ಪ್ರತಿವಾದಿಯು ಸಲ್ಲಿಸಿರುವ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಎ) ಮತ್ತು (ಡಿ) ರ ಅಡಿಯಲ್ಲಿ ಸಲ್ಲಿಸಿದಂತಹ ಮಧ್ಯಂತರ ಅರ್ಜಿ ಸಂಖ್ಯೆ -2 ನ್ನು ತಿರಸ್ಕರಿಸಲಾಗಿದೆ.

KACM210033812023

ಖರ್ಚಿನ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

**(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 09 ನೇ ಜನವರಿ 2025 ರಂದು ಉದ್ಘೋಷಿಸಲಾಯಿತು)**

ಸಹಿ/-

(ಸವಿತರಾಣಿ ಹೆಚ್.ವಿ.)
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಕಡೂರು.

Visit **ecourts.gov.in** for updates or download mobile app “**eCourts Services**” from Android or iOS